

# ಮದುವೆಯ ಗುಟ್ಟು ಬಿಚ್ಚಿಟ್ಟ ಕಾಜಲ್

ಯಶಸ್ಸಿನ ಉತ್ತುಂಗದಲ್ಲಿರುವ ನಟಿಯರು ಸಾಮಾನ್ಯವಾಗಿ ಅದರ ಲಾಭವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಆದರೆ ಇದಕ್ಕೆ ಅಪವಾದ ಎನಿಸಿದ್ದು ಕಾಜಲ್. 1999ರಲ್ಲಿ ಕಾಜಲ್, ಅಜಯ್ ದೇವಗನ್ ಜತೆ ಹಸೆಮಣೆ ಏರಿದಾಗ ಆಕೆ ಗೆಲುವಿನ ಕುದುರೆ ಮೇಲಿದ್ದಳು. ಮದುವೆಯ ಬಂಧಕ್ಕೆ ಒಳಗಾಗದೆ ಇದ್ದಿದ್ದರೆ ಆಕೆ ಇನ್ನಷ್ಟು ಕಾಲ ಅದೇ ಯಶಸ್ಸಿನ ಬೆನ್ನೇರಿ ಸಾಗಬಹುದಿತ್ತು. ಆದರೂ ಕಾಜಲ್ ವೃತ್ತಿಗಿಂತ ವೈಯಕ್ತಿ ಬದುಕಿನತ್ತ ಹೊರಳಿದಳು. ಅದಕ್ಕೆ ಕಾರಣವನ್ನು ಮದುವೆಯಾದ 17 ವರ್ಷದ ಬಳಿಕ ನೀಡಿದ್ದಾಳೆ ಆಕೆ.

ಕೆಲಸದೊಳಗೆ ಮುಳುಗಿ ಹೋಗದೆ ಅದರಿಂದ ತುಸು ನಿರಾಳತೆ ಪಡೆದುಕೊಳ್ಳುವುದು ತನ್ನ ಉದ್ದೇಶವಾಗಿತ್ತು. ಆ ಕಾರಣಕ್ಕೆ ಮದುವೆಯಾಗಲು ತೀರ್ಮಾನಿಸಿದ್ದಾಗಿ ಕಾಜಲ್ ಹೇಳಿಕೊಂಡಿದ್ದಾಳೆ.

ಮದುವೆಯ ಬಳಿಕ ವರ್ಷಕ್ಕೆ ಒಂದು ಸಿನಿಮಾ ಮಾಡಬೇಕು ಎನ್ನುವುದು ಆಕೆಯ ಬಯಕೆಯಾಗಿತ್ತು. 2003ರಲ್ಲಿ ಮಗಳಿಗೆ ಜನ್ಮನೀಡಿದ ಬಳಿಕ 'ಫನಾ', 'ಯು ಮಿ ಆರ್ ಹಮ್', 'ಮೈ ನೇಮ್ ಈಸ್ ಖಾನ್', 'ದಿಲ್‌ವಾಲೆ' ಮುಂತಾದ ಸಿನಿಮಾಗಳಲ್ಲಿ ಕಾಣಿಸಿಕೊಂಡಿರುವ ಕಾಜಲ್ ಈಗಲೂ ಅದೇ ಚಾರ್ಮ್ ಉಳಿಸಿಕೊಂಡಿದ್ದಾಳೆ.

'ಆ ಸಮಯಕ್ಕೆ ಅದು ನನ್ನ ಪಾಲಿಗೆ ಸರಿಯಾದ ನಿರ್ಧಾರವೇ ಆಗಿತ್ತು. ಆಗಲೇ ಎಂಟು–ಒಂಬತ್ತು ವರ್ಷ ಸಿನಿಮಾರಂಗದಲ್ಲಿ ಕೆಲಸ ಮಾಡಿದ್ದೆ. ಹೀಗಾಗಿ ನನ್ನ ಕೆಲಸದ ವೇಗವನ್ನು ಕಡಿಮೆ ಮಾಡಬೇಕಿತ್ತು. ಅದು ಒತ್ತಡವಾಗದೆ, ಆರಾಮದಾಯಕವಾಗಿರಬೇಕು ಎಂಬುದು ನನ್ನ ಉದ್ದೇಶವಾಗಿತ್ತು' ಎಂದಿದ್ದಾಳೆ ಆಕೆ.

'ಆಗ ವರ್ಷಕ್ಕೆ ನಾಲ್ಕೈದು ಸಿನಿಮಾ ಮಾಡುತ್ತಿದ್ದೆ. ಸಿನಿಮಾಗಳನ್ನು ಮಾಡುತ್ತಲೇ ಇರುವುದು ಮತ್ತು ಅದೊಂದೇ ರೀತಿ ಬದುಕುವುದು ನನಗೆ ಇಷ್ಟವಿಲ್ಲ. ನನ್ನ ಗುರಿಯೂ ಅದಲ್ಲ. ಹೀಗಾಗಿ ಮದುವೆಯಾಗಿ ವರ್ಷಕ್ಕೆ ಒಂದು ಸಿನಿಮಾ ಮಾಡುವುದು ಎಂದು ನಿರ್ಧರಿಸಿದ್ದೆ. ಈಗ ನನಗೆ ಖುಷಿಯಿದೆ. ಬದುಕಿನ ಸೂಕ್ತ ಹಂತಕ್ಕೆ ಬಂದಿರುವ ನೆಮ್ಮದಿಯೂ ಇದೆ' ಎಂದು ಹೇಳಿಕೊಂಡಿದ್ದಾಳೆ.

# ಹಿರಾನಿ ಭಾಗ-2

ತೀವ್ರ ವಿವಾದ ಚರ್ಚೆ ಹುಟ್ಟಿಸುದ ಜತೆಗೆ ಬಾಕ್ಸ್ ಆಫೀಸನ್ನು ಕೊಳ್ಳೆಹೊಡೆದಿದ್ದ 'ಪಿಕೆ' ಚಿತ್ರದ ಎರಡನೇ ಆವೃತ್ತಿ ಸಹ ಸಿದ್ಧವಾಗಲಿದೆ ಎಂಬ ಮಾತುಗಳು ಆಗಲೇ ಕೇಳಿಬಂದಿದ್ದವು. 'ಪಿಕೆ' ಚಿತ್ರದ ಅಂತ್ಯ ಅದರ ಸುಳಿವನ್ನು ನೀಡಿತ್ತು. ನಿರ್ದೇಶಕ ರಾಜ್‌ಕುಮಾರ್ ಹಿರಾನಿ ಸಹ ಆ ಕುರಿತು ಪ್ರಸ್ತಾಪಿಸಿದ್ದರು. ಈಗ ಹಿರಾನಿ ತಲೆಯಲ್ಲಿ ಹೊಸ ಆಲೋಚನೆ ಮೂಡಿದೆ. ಅದು ಅವರ ಇನ್ನೊಂದು ಸೂಪರ್ ಹಿಟ್ ಚಿತ್ರ 'ಥ್ರೀ ಈಡಿಯೆಟ್ಸ್'ನ ಎರಡನೆಯ ಭಾಗ. ಸದ್ಯ ಸಂಜಯ್ ದತ್ ಜೀವನ ಚರಿತ್ರೆಯನ್ನು ಸಿನಿಮಾವಾಗಿಸುವ ಕೆಲಸದಲ್ಲಿರುವ ಹಿರಾನಿ, ಮುನ್ನಾಭಾಯಿ ಸರಣಿಯ ಮತ್ತೊಂದು ಸಿನಿಮಾಕ್ಕೂ ಸಿದ್ಧತೆ ನಡೆಸಿದ್ದಾರೆ. ಆದರೆ ಮುನ್ನಭಾಯಿ ಮತ್ತು ಪಿಕೆ ಚಿತ್ರಗಳಿಗೆ ಎದುರಾದ ಟೀಕೆ ಟಿಪ್ಪಣಿಗಳನ್ನು ಕಂಡ ಬಳಿಕ ಅವರು ಮುಂದಿನ ಹೆಜ್ಜೆಯನ್ನು ಎಚ್ಚರಿಕೆಯಿಂದ ಇಡಲು ನಿರ್ಧರಿಸಿದ್ದಾರೆ. ಖಂಡಿತವಾಗಿಯೂ ಈ ಚಿತ್ರಗಳ ಮತ್ತೊಂದು ಆವೃತ್ತಿ ಬರುತ್ತದೆ. ಆದರೆ ಸದ್ಯಕ್ಕೆ 'ಪಿಕೆ' ಅಲ್ಲಿಯೇ ಇರಲಿ. ಅಲ್ಲಿನ ಏಲಿಯನ್ ಬೇರೇನಾದರೂ ಕೆಲಸ ಮಾಡಿಕೊಂಡಿರಲಿ ಎಂದು ಚಟಾಕಿ ಹಾರಿಸಿದ್ದಾರೆ ಹಿರಾನಿ.

ಅಮೀರ್ ಖಾನ್ ಜತೆ ಕೆಲಸ ಮಾಡುವುದು ತನಿಗಿಷ್ಟ ಎಂದು ಹಿರಾನಿ ಹೇಳಿಕೊಂಡಿದ್ದಾರೆ. 'ಅಮೀರ್ ಕೆಲಸ ಮಾಡಲು ಖುಷಿಯಾಗುವ ವ್ಯಕ್ತಿತ್ವದವರು. ಸಿನಿಮಾದೊಳಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಅಪರೂಪದ ಕಲಾವಿದರಲ್ಲಿ ಅಮೀರ್ ಒಬ್ಬರು. ಹೀಗಾಗಿ ಅವರೊಂದಿಗೆ ಕೆಲಸ ಮಾಡುವುದು ನನಗಿಷ್ಟ. ಮುಖ್ಯವಾಗಿ 'ಥ್ರೀ ಈಡಿಯೆಟ್ಸ್'ನ ಎರಡನೆಯ ಆವೃತ್ತಿಗೆ ಅದ್ಭುತವಾದ ಸಂಗತಿ ಹೊಳೆದಿದೆ. ಅದಿನ್ನೂ ತೆಳುವಾದ ಎಳೆ. ಅದರ ಕುರಿತು ಕೆಲಸ ಮಾಡಬೇಕಿದೆ. ಅದು ಸಾಧ್ಯವಾದರೆ ಇಬ್ಬರೂ ಮತ್ತೆ ಒಟ್ಟಿಗೆ ಕೆಲಸ ಮಾಡುತ್ತೇವೆ' ಎಂದಿದ್ದಾರೆ ಹಿರಾನಿ.





